**ಕರ್ನಾಟಕ ಸರ್ಕಾರ**

ಸಿಆಸುಇ 174 ಹೈಕಕೋ 2020

ಕರ್ನಾಟಕ ಸರ್ಕಾರ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ: 25.02.2021

**ಅಧಿಸೂಚನೆ**

ಕರ್ನಾಟಕ (ಹೈದರಾಬಾದ್ ಕರ್ನಾಟಕ ಪ್ರದೇಶಕ್ಕಾಗಿ ರಾಜ್ಯಪಾಲರ ವಿಶೇಷ ಹೊಣೆಗಾರಿಕೆ) ಆದೇಶ, ೨೦೧೩ರ ೨ನೇ ಖಂಡದಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕದ ರಾಜ್ಯಪಾಲರು ಈ ಮೂಲಕ ಕಲ್ಯಾಣ-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಆದೇಶ, ೨೦೧೩ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಈ ಕೆಳಕಂಡಂತೆ ಆದೇಶ ಮಾಡಿರುತ್ತಾರೆ. ಎಂದರೆ:-

**ಆದೇಶ**

1. **ಶೀರ್ಷಿಕೆ ಮತ್ತು ಪ್ರಾರಂಭ.**- (1) ಈ ಆದೇಶವನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ತಿದ್ದುಪಡಿ) ಆದೇಶ, 2021 ಎಂದು ಕರೆಯತಕ್ಕದ್ದು.

(2) ಇದು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **2ನೇ ಖಂಡಿಕೆಯ ತಿದ್ದುಪಡಿ.**- ಕಲ್ಯಾಣ-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಆದೇಶ, ೨೦೧೩ರಲ್ಲಿನ (ಇಲ್ಲಿ ಇನ್ನುಮುಂದೆ ಸದರಿ ಆದೇಶವೆಂದು ಉಲ್ಲೇಖಿಸಲಾಗಿದೆ) ಖಂಡಿಕೆ ೨ರ ಖಂಡ (ಈ)ರಲ್ಲಿ "ಮತ್ತು ಕೊಪ್ಪಳ" ಎಂಬ ಪದಗಳಿಗೆ ಬದಲಾಗಿ "ಕೊಪ್ಪಳ ಮತ್ತು ವಿಜಯನಗರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

೩. **೩ನೇ ಖಂಡಿಕೆಯ ತಿದ್ದುಪಡಿ.**- ಸದರಿ ಆದೇಶದ ೩ನೇ ಖಂಡಿಕೆಯ ಉಪ-ಖಂಡಿಕೆ (ಡಿ)ರಲ್ಲಿ "ಮತ್ತು ರಾಯಚೂರು ಜಿಲ್ಲೆಗಳು" ಎಂಬ ಪದಗಳಿಗೆ ಬದಲಾಗಿ "ರಾಯಚೂರು ಮತ್ತು ವಿಜಯನಗರ ಜಿಲ್ಲೆಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

...........2

4. **17ನೇ ಖಂಡಿಕೆಯ ತಿದ್ದುಪಡಿ.-** ಸದರಿ ಆದೇಶದ 17ನೇ ಖಂಡಿಕೆಯ ಖಂಡ (ಬಿ) ರಲ್ಲಿ "ಮತ್ತು ರಾಯಚೂರು ಜಿಲ್ಲೆಗಳು" ಎಂಬ ಪದಗಳಿಗೆ ಬದಲಾಗಿ "ರಾಯಚೂರು ಮತ್ತು ವಿಜಯನಗರ ಜಿಲ್ಲೆಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**ವಜೂಭಾಯಿ ವಾಲಾ**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಮಾರುತಿ ಪ್ರಸನ್ನ ಬಿ. ವಿ.)**
ಸರ್ಕಾರದ ಉಪ ಕಾರ್ಯದರ್ಶಿ
(ಹೈದ್ರಾಬಾದ್ - ಕರ್ನಾಟಕ ವಿಶೇಷ ಕೋಶ)
ಸಿಆಸುಇ

**ಇವರಿಗೆ:**
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ (ಘಟಕ 2), ಆರ್. ವಿ ಕಾಲೇಜು ಅಂಚೆ, ಮೈಸೂರು ರಸ್ತೆ, ಬೆಂಗಳೂರು-560059 ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ IV ಎ-ನಲ್ಲಿ ತಕ್ಷಣದ ಪ್ರಕಟಣೆಗಾಗಿ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಬಳಕೆಗಾಗಿ 1000 ಪ್ರತಿಗಳನ್ನು ಸರಬರಾಜು ಮಾಡುವುದಕ್ಕಾಗಿ.

**ಪ್ರತಿ:**
1. ಘನತೆವೆತ್ತ ರಾಷ್ಟ್ರಪತಿಗಳ ಕಾರ್ಯದರ್ಶಿಗಳು, ರಾಷ್ಟ್ರಪತಿ ಭವನ, ನವ ದೆಹಲಿ-110001
2. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
3. ಕಾರ್ಯದರ್ಶಿಗಳು, ಕೇಂದ್ರ ಗೃಹ ಮಂತ್ರಾಲಯ, ಭಾರತ ಸರ್ಕಾರ, ಎನ್‌ಡಿಸಿಸಿ-2ನೇ ಕಟ್ಟಡ, ಜೈಸಿಂಗ್ ರಸ್ತೆ, ನವ ದೆಹಲಿ - 110001
4. ಕಾರ್ಯದರ್ಶಿಗಳು, ಕಾನೂನು ಮತ್ತು ನ್ಯಾಯ ಇಲಾಖೆ, ಭಾರತ ಸರ್ಕಾರ, ನವ ದೆಹಲಿ - 110001.
5. ಮಾನ್ಯ ಮುಖ್ಯ ಮಂತ್ರಿಗಳ ಅಪರ ಮುಖ್ಯ ಕಾರ್ಯದಶಿಗಳು,
6. ಮಾನ್ಯ ಅಧ್ಯಕ್ಷರು, ಸಚಿವ ಸಂಪುಟ ಉಪ ಸಮಿತಿ (ಅನುಚ್ಛೇಧ 371ಜೆ) ಹಾಗೂ ಮಾನ್ಯ ಉಪ ಮುಖ್ಯ ಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ.
7. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.

************